## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು

ದಿನಾಂಕಃ 30ನೇ ಜುಲೈ ತಿಂಗಳು 2025 ರಂದು

**ಸಿಸಿ ನಂ.102/2024**

**ಫಿರ್ಯಾದುದಾರಃ** ಚೆಲುವರಾಜು, ಬಿನ್ ಲೇಟ್ ಗುಡ್ಡಯ್ಯ,
ವಯಸ್ಸು ಸುಮಾರು 52 ವರ್ಷ,
ವಾಸಃ ಕಿರಿಜಾಜಿ ಗ್ರಾಮ, ಕಸಬಾ ಹೋಬಳಿ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

**- ವಿರುದ್ಧ -**

**ಆರೋಪಿಃ** ಮಂಜುನಾಥ.ಹೆಚ್.ಕೆ., ಬಿನ್ ಲೇಟ್ ಕುಳ್ಳಯ್ಯ,
ವಯಸ್ಸು ಸುಮಾರು 45 ವರ್ಷ,
ವಾಸಃ ಮನೆ ನಂ.403/1, ನಿಂಗಯ್ಯನ ಕೆರೆ,
ಕುಂಬಾರ ಕೊಪ್ಪಲು, ಮೆಟಗಳ್ಳಿ, ಮೈಸೂರು.

### ದಂಡ ಪ್ರಕ್ರಿಯಾ ಸಂಹಿತೆಯ ಕಲಂ 251 ರ ಅಡಿಯಲ್ಲಿ ಆರೋಪಣಾ ಸಾರಾಂಶ

ಆರೋಪಿಯಾದ ನೀವು ಮತ್ತು ಫಿರ್ಯಾದುದಾರರಾದ ಚೆಲುವರಾಜು ರವರು ಹಲವಾರು ವರ್ಷಗಳಿಂದಲೂ ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ನೀವು ಫಿರ್ಯಾದುದಾರರಿಂದ ನಿಮ್ಮ ದರದ್ದು ನಿಮಿತ್ತ ಅಂದರೆ ಕಾನೂನು ಬದ್ಧ ಅವಶ್ಯಕತೆಗಾಗಿ ರೂ.2,50,000/- ಗಳನ್ನು ದಿನಾಂಕ 15.10.2023 ರಂದು ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ತೀರುವಳಿಗಾಗಿ ದಿನಾಂಕಃ 07.12.2023 ರಂದು ಪಾವತಿಯಾಗುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸೋಮವಾರಪೇಟೆ ಶಾಖೆಯ ಚೆಕ್ ಸಂಖ್ಯೆ 338402 ಅನ್ನು ರೂ.2,50,000/- ಗಳಿಗೆ ನೀಡಿದ್ದು, ಅದನ್ನು ಫಿರ್ಯಾದಿದಾರರು ತಮ್ಮ ಖಾತೆ ಹೊಂದಿರುವ ಇಂಡಿಯನ್ ಓವರ್ ಸೀಸ್ ಬ್ಯಾಂಕ್, ಹುಣಸೂರು ಶಾಖೆಯ ಮೂಲಕ ದಿನಾಂಕಃ

07.12.2023ರಂದು ನಗದೀಕರಣಕ್ಕಾಗಿ ಹಾಜರುಪಡಿಸಿದಾಗ "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಕಾರಣಕ್ಕಾಗಿ ಸದರಿ ಚೆಕ್ ದಿನಾಂಕ:13.12.2023 ರ ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ದಿನಾಂಕ: 15.12.2023 ರಂದು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನಿಮ್ಮ ವಿಳಾಸಕ್ಕೆ ನೋಟೀಸು ನೀಡಿದ್ದು, ಸದರಿ ನೋಟೀಸು ನಿಮಗೆ ಜಾರಿಯಾಗದೇ ದಿನಾಂಕಃ 20.12.2023 ರಂದು "Unclaimed" ಎಂಬ ಷರಾದೊಂದಿಗೆ ವಾಪಾಸ್ ಆಗಿದ್ದು, ಈ ಬಗ್ಗೆ ನಿಮಗೆ ಮಾಹಿತಿ ಇದ್ದರೂ ಕೂಡ ನೀವು ಚೆಕ್ ನಲ್ಲಿ ನಮೂದಿಸಿದ ಹಣವನ್ನಾಗಲೀ ನೋಟೀಸಿಗೆ ಉತ್ತರವನ್ನಾಗಲೀ ನೀಡದೆ ಇರುವುದರಿಂದ ನೀವು ನೆಗೋಷಿಯೇಬಲ್ ಇನ್ ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ 138ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

| | |
|---|---|
| ಪ್ರಶ್ನೆಃ1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆಃ 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು. |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ANITHA Digitally signed by ANITHA Date: 2025.07.30 17:46:10 +0530

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ